ಇಮೋಜಿ ಭಾಷೆ

**ಕರ್ಕಿ ಕೃಷ್ಣಮೂರ್ತಿ**



# ಇತರರ ಸುಖದ ಆಯ್ಕೆಯನ್ನು ಪ್ರಶ್ನಿಸುವ ಹಕ್ಕು ನಮಗಿದೆಯೆ?

ಭೂಮಿಯ ಮೇಲಿನ ಯಾವುದೇ ಪ್ರಾಣಿಗೂ ಮನುಷ್ಯನ ಕರುಣೆಯ ಅಗತ್ಯವಿಲ್ಲ. 'ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ ಅಡಿಗಡಿಗೆ ಆಹಾರವಿತ್ತವರು ಯಾರೋ' ಎನ್ನುವ ದಾಸರ ಪದಕ್ಕೆ ಉತ್ತರ ಮನುಷ್ಯನಲ್ಲ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ಎನ್ನುವ ಗಾದೆ ಸುಮ್ಮನೆ ಹುಟ್ಟಿದ್ದಲ್ಲ.

ನಾನು ಮುಂಜಾನೆ ವಾಕಿಂಗ್ ಹೋಗುವ ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ, ಹಲವರು ಬಿಸ್ಕೆಟ್ ಪೊಟ್ಟಣವನ್ನು ಮನೆಯಿಂದ ತಂದು ನಾಯಿಗಳಿಗೆ ತಿನ್ನಿಸುವುದು, ಬ್ರೆಡ್ಡನ್ನು ಚೂರು ಮಾಡಿ ಕಾಗೆಗಳಿಗೆ ಎಸೆಯುವುದನ್ನು ದಿನವೂ ನೋಡುತ್ತೇನೆ. ನಿತ್ಯ ಕರ್ಮದಂತೆ ಅದನ್ನು ಪೂರೈಸುತ್ತಾರವರು. ಇತ್ತೀಚೆಗೆ ಆ ಪಂಗಡಕ್ಕೆ ಹೊಸ ವ್ಯಕ್ತಿಯೊಬ್ಬನ ಪ್ರವೇಶವಾಗಿದೆ. ಆತ ತನ್ನ ದುಬಾರಿ ಕಾರಿನ ಡಿಕ್ಕಿಯಲ್ಲಿ ಬರೋಬ್ಬರಿ ಒಂದಿಡೀ ಬಾಳೆಗೊನೆ ತಂದು, ಹಣ್ಣುಗಳನ್ನು ಸೊಗೆಸೊಗೆದು ಕೋತಿಗಳಿಗೆ ಕೊಡುತ್ತಾನೆ. ಈತ ಎಸೆಯುವ ಹಣ್ಣನ್ನು ಮಂಗಗಳು ಮರದ ಮೇಲಿಂದಲೇ ಕ್ಯಾಚ್ ಹಿಡಿಯುವುದು, ಒಂದು ಕೈಯಿಂದ ಕೊಂಬೆಗೆ ನೇತು ಬಿದ್ದು ಇನ್ನೊಂದು ಕೈಯನ್ನು ಚಾಚಿ ಹಣ್ಣನ್ನು ಕಸಿದುಕೊಳ್ಳುವುದು ಇತ್ಯಾದಿ ಮಂಗನಾಟ ನೋಡಲು ಅದೆಷ್ಟು ಸೊಗಸೆಂದರೆ, ದಾರಿಯಲ್ಲಿ ಹೋಗುತ್ತಿರುವ ಕೆಲವರು ಆತನೊಡನೆ ಸೇರಿಕೊಂಡು ಕೋತಿಗೆ ತಿನ್ನಿಸುವ ಕಾಯಕದಲ್ಲಿ ತಾವೂ ಕೈಜೋಡಿಸುವುದಿದೆ.

ಆ ವ್ಯಕ್ತಿ ಸಹಜವಾಗಿ ನಮ್ಮೆಲ್ಲರ ಚರ್ಚೆಯ ಕೇಂದ್ರ. 'ಆತನ ಪ್ರಾಣಿ ಪ್ರೀತಿ ನೋಡಿ' ಎಂದು ಒಬ್ಬ ಪ್ರಶಂಸಿಸಿದರೆ, 'ಹಣದ ಮದ ಇದು' ಎಂದು ಇನ್ನೊಬ್ಬ ಮೂದಲಿಸುತ್ತಾನೆ. 'ಸ್ವಜಾತಿ ಪ್ರೇಮಕ್ಕಿದು ಒಳ್ಳೆಯ ಉದಾಹರಣೆ' ಎನ್ನುವ ತಮಾಷೆಯ ಮಾತು, 'ಅದ್ಯಾವುದೂ ಅಲ್ಲ. ಇದರ ಹಿಂದಿರುವುದು ನಂಬಿಕೆ. ಯಾವುದಾದರೂ ಜ್ಯೋತಿಷಿ ಇವನಿಗೆ ದಿನವೂ ಮಂಗಗಳಿಗೆ ಬಾಳೆಹಣ್ಣು ತಿನ್ನಿಸುವುದರಿಂದ ದೋಷಗಳೆಲ್ಲಾ ಪರಿಹಾರವಾಗುತ್ತೆ ಎಂದು ಹೇಳಿರುತ್ತಾನೆ ಅದಕ್ಕೆ...' ಎನ್ನುವ ವಿಚಾರಗಳ ಮುಖೇನ ಈ ಸುಕೃತ್ಯಕ್ಕೆ ಕಾರಣವಾಗಿರಬಹುದಾದ ಅಂಶಗಳೆಲ್ಲಾ ವಿಶ್ಲೇಷಣೆಗೊಳಗಾಗುತ್ತವೆ. ಮೇಲ್ನೋಟದ ಕಾರಣ ಏನೇ ಇರಲಿ, ಇದರ ಹಿಂದೆ ಕೆಲಸಮಾಡುತ್ತಿರುವುದು ಮನುಷ್ಯನ ಅಹಂಕಾರವೇ ಎನ್ನುವುದು ಎನ್ನುವುದು ನನ್ನ ಅನಿಸಿಕೆ. ಏಕೆಂದರೆ, 'ಮೂಕಪ್ರಾಣಿಯೊಂದರ ಹಸಿವನ್ನು ತೀರಿಸುವಲ್ಲಿ ನನ್ನದೊಂದು ಸಣ್ಣ ಕಾಣ್ಕೆಯಿದು' ಎನ್ನುವ ಭಾವವೊಂದು ಆತನ ಅರಿವಿದ್ದೋ ಇಲ್ಲದೆಯೋ ಸೂಕ್ಷ್ಮವಾಗಿ ಮೆದುಳಿನ ತಳದಲ್ಲಿ ಪ್ರವಹಿಸುತ್ತಿರುವ ಸಾಧ್ಯತೆಯೇ ಹೆಚ್ಚಿದೆಯಿಲ್ಲಿ.